RNU AIR DHARWAD

APRIL 30, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಕರ್ನಾಟಕವನ್ನು, 2028ರ ಒಳಗೆ, ಕ್ವಾಂಟಮ್ ತಂತ್ರಜ್ಞಾನದ, ಜಾಗತಿಕ ತಾಣವಾಗಿ ರೂಪಿಸುವ, ಮಹತ್ವಾಕಾಂಕ್ಷಿ ಯೋಜನೆ, 'ಕ್ವಾಂಟಮ್ ಸಿಟಿ' ನಿರ್ಮಾಣಕ್ಕೆ, ರಾಜ್ಯ ಸರ್ಕಾರ ಆದ್ಯತೆ ನೀಡಿದೆ ಎಂದು, ವಿಜ್ಞಾನ ಹಾಗೂ ತಂತ್ರಜ್ಞಾನ ಖಾತೆ ಸಚಿವ, ಎನ್.ಎಸ್. ಬೋಸರಾಜು, ತಿಳಿಸಿದ್ದಾರೆ. ಬೆಂಗಳೂರಿನ ಹೆಸರಘಟ್ಟ ಸಮೀಪ, ಕ್ವಾಂಟಮ್ ಸಿಟಿ ನಿರ್ಮಾಣಕ್ಕೆ ಮಂಜೂರಾದ, 6 ಎಕರೆ 23 ಗುಂಟೆ ಭೂಮಿಯನ್ನು, ಅಧಿಕಾರಿಗಳೊಂದಿಗೆ ಸಚಿವರು ಪರಿಶೀಲಿಸಿದರು. ಬಳಿಕ ಮಾಹಿತಿ ನೀಡಿ, ಕ್ವಾಂಟಮ್ ಸಿಟಿ ಯೋಜನೆ, 2035ರ ವೇಳೆಗೆ, ರಾಜ್ಯದಲ್ಲಿ 20 ಬಿಲಿಯನ್ ಡಾಲರ್ ಮೌಲ್ಯದ, ಕ್ವಾಂಟಮ್ ಆರ್ಥಿಕತೆಯನ್ನು ರೂಪಿಸುವ, ಭಾಗವಾಗಿದೆ ಎಂದರು.

<><><>

ಬೀದರ ಜಿಲ್ಲೆ, ಮಾಳೆಗಾಂವ ಹಾಗೂ ಸುತ್ತಲಿನ ಗ್ರಾಮಗಳ ಜನರಿಗೆ, ಅನುಕೂಲ ಕಲ್ಪಿಸಲು, 5 ಕೋಟಿ ರೂಪಾಯಿ ವೆಚ್ಚದಲ್ಲಿ, ಆಸ್ಪತ್ರೆ ನಿರ್ಮಾಣವಾಗಲಿದೆ ಎಂದು, ಎಂದು ಪೌರಾಡಳಿತ ಖಾತೆ ಸಚಿವ, ರಹೀಂ ಖಾನ್ ತಿಳಿಸಿದ್ದಾರೆ. ಬೀದರ ತಾಲೂಕು, ಮಾಳೆಗಾಂವ ದಲ್ಲಿ, ಜನ ಸ್ಪಂದನ ಕಾರ್ಯಕ್ರಮದಲ್ಲಿ, ಸಚಿವರು ಪಾಲ್ಗೊಂಡು, ಜನತೆಯ ಅಹವಾಲು ಆಲಿಸಿ, ಮಾತನಾಡಿದರು. ಮಾಳೆಗಾಂವ ದಲ್ಲಿ ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ, ಮುಂಬರುವ 2 ತಿಂಗಳಲ್ಲಿ ಚಾಲನೆ ನೀಡಲಾಗುವುದು ಎಂದರು.

<><><>

ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಮುಂತಾದ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ, ಮಕ್ಕಳ ಪ್ರತಿಭಾ ವಿಕಾಸಕ್ಕೆ, ಪಾಲಕರು ಅವಕಾಶ ಕಲ್ಪಿಸುತ್ತಿರುವುದು, ಸಂತಸದ ವಿಷಯ ಎಂದು, ಹಿರಿಯ ಕಲಾವಿದ ಉಮಾಶ್ರೀ ಸಂತಸ ವ್ಯಕ್ತ ಪಡಿಸಿದ್ದಾರೆ. ಧಾರವಾಡ ರಂಗಾಯಣದ, 'ಅಭಿನಯ-ಅಭಿವ್ಯಕ್ತಿ', ಬೇಸಿಗೆ ಶಿಬಿರದಲ್ಲಿ ಅವರು, ಮಾತನಾಡಿದರು. ರಂಗಾಯಣ, ಶಿಬಿರದ ಮೂಲಕ, ಮಕ್ಕಳ ಕಲೆ ಪ್ರೋತ್ಸಾಹಿಸುತ್ತಿದೆ ಎಂದರು. ರಂಗಾಯಣದ ನೂತನ ನಿರ್ದೇಶಕ, ಝುಕೀರ ನದಾಫ, ಪಾಲ್ಗೊಂಡಿದ್ದರು.

<><><>

ರಾಜ್ಯದ ವಿವಿಧೆಡೆ ತಾಪಮಾನ ಏರಿಕೆ ಹಿನ್ನೆಲೆ, ಎದುರಾಗುವ ಸವಾಲುಗಳನ್ನು ನಿಭಾಯಿಸಲು, 2026 ರ ಭಾರತ ಹವಾಮಾನ ಇಲಾಖೆ ಹೊರಡಿಸಿರುವ ಶಾಖದ ಅಲೆಗಳ ನಿರ್ವಹಣಾ ಮಾರ್ಗಸೂಚಿಯಂತೆ ನಗರ ಸ್ಥಳೀಯ ಸಂಸ್ಥೆಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ, ಪೌರಾಡಳಿತ ನಿರ್ದೇಶನಾಲಯ ಕೋರಿದೆ.

<><><>

ಬೀದರ ಜಿಲ್ಲೆಯಾದ್ಯಂತ, ಮೇ ತಿಂಗಳಲ್ಲಿ, ಬಿಸಿ ಗಾಳಿ ಬೀಸುವ ಸಾಧ್ಯತೆ ಇದ್ದು, ಹೀಟ್ ವೇವ್ ಸ್ಟ್ರೋಕ್‌ನಿಂದ, ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಹಿನ್ನೆಲೆ, ಸಾರ್ವಜನಿಕರು, ಕಟ್ಟುನಿಟ್ಟಾಗಿ, ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವಂತೆ, ಬೀದರ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಮನವಿ ಮಾಡಿದ್ದಾರೆ.

<><><>

ಕಲಬುರಗಿ ಜಿಲ್ಲೆಯಾದ್ಯಂತ, 45 ಡಿಗ್ರಿ ಮೇಲ್ಪಟ್ಟು, ತಾಪಮಾನ ದಾಖಲಾಗುತ್ತಿದ್ದು, ಉಷ್ಣಾಘಾತದ ಸಂಭವವಿದೆ. ಸಾರ್ವಜನಿಕರು ಹಾಗೂ ಕಾರ್ಮಿಕರು, ಮುಂಜಾಗ್ರತಾ ಕ್ರಮ ಪಾಲಿಸುವಂತೆ, ಜಿಲ್ಲಾ ಕಾರ್ಮಿಕ ಅಧಿಕಾರಿ ಎಸ್.ಆರ್.ಹಳಿಮನಿ ಕೋರಿದ್ದಾರೆ.

<><><>

ಮಹಿಳಾ ಮೀಸಲಾತಿ ಮಸೂದೆಗೆ ಅಡ್ಡಿಪಡಿಸುತ್ತಿರುವ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳ ಧೋರಣೆ ಖಂಡಿಸಿ ನಾಳೆ, ಮೇ 1 ರಂದು, ಸಂಜೆ 4 ಗಂಟೆಗೆ, ಹುಬ್ಬಳ್ಳಿಯ ನೆಹರು ಮೈದಾನದಲ್ಲಿ ಬೃಹತ್ 'ಜನಾಕ್ರೋಶ ಪಾದಯಾತ್ರೆ' ಆಯೋಜಿಸಲಾಗಿದೆ ಎಂದು ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ್ ಜೋಷಿ ತಿಳಿಸಿದ್ದಾರೆ. ಎಕ್ಸ್ ಖಾತೆ ಮೂಲಕ ಮಾಹಿತಿ ಹಂಚಿಕೊಂಡಿರುವ ಅವರು, 'ನಾರಿ ಶಕ್ತಿ – ರಾಷ್ಟ್ರ ಶಕ್ತಿ' ಎಂಬ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಸಂಕಲ್ಪಕ್ಕೆ ಬಲ ತುಂಬುವ ಸಮಯವಾಗಿದೆ ಎಂದು ತಿಳಿಸಿದ್ದಾರೆ.

<><><>

ಪ್ರಲ್ಹಾದ್ ಜೋಶಿ ಧ್ವನಿ– 40 ಸೆಕೆಂದುಗಳು

<><><>

ಧಾರವಾಡ ಜಿಲ್ಲಾ ಪಂಚಾಯಿತಿ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ, ಜನಪ್ರತಿನಿಧಿಗಳ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿರುವ ವಿನಯ ಕುಲಕರ್ಣಿ ಅವರ ಶಾಸಕ ಸ್ಥಾನ ಈಗಾಗಲೇ ರದ್ದಾಗಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ ಖಾದರ್ ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

<><><>

ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಸಂರಕ್ಷಣೆ ಕುರಿತು ದೂರದಾರರು ನೇರವಾಗಿ ಆಯೋಗಕ್ಕೆ ಪೋಸ್ಟ್ ಅಥವಾ ಆನ್‌ಲೈನ್ ಮೂಲಕ ದೂರನ್ನು ಸಲ್ಲಿಸಬಹುದು ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾಕ್ಟರ ಟಿ.ಶ್ಯಾಮ ಭಟ್ ಹೇಳಿದರು. ಕಾರವಾರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಾತನಾಡಿದ ಅವರು, ಆಯೋಗದಲ್ಲಿ ಶೇಕಡ 60 ರಷ್ಟು ದೂರುಗಳು ಸ್ವಯಂ ಪ್ರೇರಿತವಾಗಿ ದಾಖಲಾಗಿಸಲಾಗುತ್ತಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ದಾಖಲಾದ 30 ಪ್ರಕರಣಗಳಲ್ಲಿ 27 ಪ್ರಕರಣಗಳು ಇತ್ಯರ್ಥ ಪಡಿಸಲಾಗಿದೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>